# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಜಿ.ಎಂ.ಬಸಣ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ರಾಯಚೂರು, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:** 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ ಉಪಲೋಕ್/ಜಿಎಲ್‌ಬಿ-1019/2015/ಎಆರ್‌ಇ-5, ದಿನಾಂಕ: 03.01.2017.

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ-1019/2015/ಎಆರ್‌ಇ-5, ದಿನಾಂಕ: 05.01.2017.

****

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ರಾಯಚೂರು ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಗಿಲ್ಲೇಸೂಗೂರು ಗ್ರಾಮ ಪಂಚಾಯತಿಯಲ್ಲಿ 2014-15ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ವಿವಿಧ ಕಾಮಗಾರಿಗಳಿಗೆ ಮೊತ್ತ ರೂ.19,80,333/-ಗಳನ್ನು ಕಾಮಗಾರಿ ನಿರ್ವಹಿಸದೇ ಅವ್ಯವಹಾರ ನಡೆಸಿ ಹಣದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಆರೋಪಿಸಿ, ಶ್ರೀಮತಿ ಪುಷ್ಪಲತಾ ಜಿ. ಪಂಚಾಯತ ಅಭಿವೃದ್ಧಿ ಅಧಿಕಾರಿ, ಗಿಲ್ಲೇಸೂಗೂರು ಗ್ರಾಮ ಪಂಚಾಯತಿ ಇವರ ವಿರುದ್ಧ ಶ್ರೀ ಸುಧೀಂದ್ರ ರಾವ್ ಕಸ್ಬೆ, ಮಾಜಿ ಸಚಿವರು ಎಪಿಎಂಸಿ ಮತ್ತು ಮುಜರಾಯಿ, ಲಕ್ಷ್ಮೀವೆಂಕಟೇಶ್ವರ ಪ್ಯಾಲೇಸ್, ಗಿಲ್ಲೇಸೂಗೂರು, ರಾಯಚೂರು ಜಿಲ್ಲೆ, ಇವರು ನೀಡಿದ್ದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರನ್ವಯ ತನಿಖೆಗೆ ಕೈಗೆತ್ತಿಕೊಳ್ಳಲಾಗಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತ-2 ರವರ ವರದಿಯಲ್ಲಿ ನಮೂದಿಸಲಾಗಿರುತ್ತದೆ.

ದೂರುದಾರರ ದೂರಿನ ಬಗ್ಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನೀಯರ್-2 ಹಾಗೂ ತನಿಖಾಧಿಕಾರಿ, ಇವರು ನಡೆಸಿದ ತನಿಖಾ

ವರದಿ ಹಾಗೂ ತಮ್ಮ ಅಭಿಪ್ರಾಯದೊಂದಿಗೆ ಸಲ್ಲಿಸಿದ ವರದಿಯಲ್ಲಿ ಈ ಕೆಳಕಂಡಂತೆ ವರದಿಸಿರುತ್ತಾರೆಂದು ಮಾನ್ಯ ಉಪಲೋಕಾಯುಕ್ತ-1 ರವರು ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ.

1. Construction of road from the house of Bagundappa up house of Balaram:

    a) In the M.B the measurement of Murram has been shown as 600 cum but, the actual measurement is only 72 Cum.

    b) In the cash bill No. 416 towards conveyance charges of murram, the name, date and signatures are blank and inspite of in the M.B. said bill for Rs.62,983-00 has been passed.

    c) In the tax invoice, the name, date and signatures are blank and inspite of it the same has been entered in the M.B. and considered for payament.

    d) The loss caused due to above loss is Rs.1,16,688/-.

    e) The officers responsible for executing the said work are Respondent No.1 Pushpalatha, the then Executive Officer and Sri. Baburao- Juniour Engineer,Z.P. E. Sub.Divn.

ತನಿಖಾಧಿಕಾರಿಯವರ ತನಿಖಾ ವರದಿಯ ಸ್ವೀಕೃತಗೊಂಡ ನಂತರ, ಶ್ರೀ ಜಿ.ಎಂ.ಬಸಣ್ಣ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ರಾಯಚೂರು, ಮತ್ತು ಶ್ರೀ ಬಾಬುರಾವ್, ಕಿರಿಯ ಇಂಜಿನೀಯರ್, ಇವರುಗಳನ್ನು ಎದುರುದಾರರು 2 ಮತ್ತು 3 ಎಂದು ಸೇರಿಸಲಾಗಿದೆ ಎಂದು ವರದಿಸಲಾಗಿರುತ್ತದೆ. ತನಿಖಾಧಿಕಾರಿಗಳ ವರದಿಯ ಬಗ್ಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು 1 ರಿಂದ 3 ರವರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ ತನಿಖಾ ವರದಿಯ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆಂದು, ನಮೂದಿಸಿರುತ್ತಾರೆ.

ತನಿಖಾಧಿಕಾರಿಯವರ ತನಿಖಾ ವರದಿಯಲ್ಲಿ ಮಾಡಿರುವ ಈ ಕೆಳಕಂಡ ಅಂಶಗಳು/ಆರೋಪಗಳು ಎದುರುದಾರರು 1 ರಿಂದ 3 ರವರುಗಳು ಸಲ್ಲಿಸಿರುವ ತಮ್ಮ ಲಿಖಿತ ಹೇಳಿಕೆಗಳು ಅವರುಗಳ ವಿರುದ್ಧ ಆರೋಪಗಳನ್ನು ಕೈಬಿಡಲು ಸೂಕ್ತವಾಗಿರುವುದಿಲ್ಲವೆಂದು ಮಾನ್ಯ ಉಪಲೋಕಾಯುಕ್ತರು ತಮ್ಮ ವರದಿಯಲ್ಲಿ ವರದಿಸಿರುತ್ತಾರೆ.

I. ಕಾಮಗಾರಿಯ ಅಳೆತೆಯನ್ನು ತಪ್ಪಾಗಿ ಲೆಕ್ಕಮಾಡಿ ವಾಸ್ತವ ಅಳತೆಗಿಂತ ಹೆಚ್ಚಿನ ಉದ್ದವನ್ನು ಪರಿಗಣಿಸಿ, ತನ್ಮೂಲಕ ಹೆಚ್ಚಿನ ಪ್ರಮಾಣಗಳನ್ನು ಲೆಕ್ಕಹಾಕಿರುವುದಲ್ಲದೇ ಅನುಮಾನಕ್ಕೆ ಎಡೆಯಾಗುವಂತಹ ಕ್ಯಾಷ್ ಬಿಲ್ ಮತ್ತು ಟ್ಯಾಕ್ಸ್ ಇನ್‌ವಾಯ್ಸ್‌ಗಳನ್ನು ಬಿಲ್ಲಿನೊಂದಿಗೆ ಪಾವತಿಗೆ ಸಲ್ಲಿಸಿರುವುದು, ಈ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ ಮೇಲ್ನೋಟಕ್ಕೆ ಒಪ್ಪಿಕೊಂಡು ಪಾವತಿಗೆ ಶಿಫಾರಸ್ಸು ಮಾಡಿರುವ ಮತ್ತು ಅನುಮೋದಿಸಿರುವ ತನ್ಮೂಲಕ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟುಮಾಡಿರುವ ಬಗ್ಗೆ ದೂರುದಾರರು ಎತ್ತಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಅನಗತ್ಯವಾಗಿ ಸರ್ಕಾರದ ಹಣವನ್ನು ಹೆಚ್ಚುವರಿಯಾಗಿ ಪಾವತಿಸಿರುವ ಕ್ರಮವು ದಂಡನಾರ್ಹವೆಂದು ತನಿಖಾಧಿಕಾರಿಯಾಗಿ ಅಭಿಪ್ರಾಯಿಸುತ್ತೇನೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ರೂ. 1,16,688/-ಗಳಷ್ಟು ನಷ್ಟವಾಗಿರುವುದು ಕಾಮಗಾರಿಯ ತನಿಖೆಯ ಸಮಯದಲ್ಲಿ ಮೇಲ್ನೋಟಕ್ಕೆ ಕಂಡು ಬಂದಿದ್ದು, ದಾಖಲೆಗಳ ಪರಿಶೀಲನೆಯ ನಂತರ ಸ್ಪಷ್ಟವಾಗಿ ಸಾಬೀತಾಗಿರುತ್ತದೆ.

II. ಸದರಿ ಆಪಾದಿತ ರಸ್ತೆ ನಿರ್ಮಾಣದ ಉಸ್ತುವಾರಿ ತಾಂತ್ರಿಕ ಮಾರ್ಗದರ್ಶನ, ಗುಣಮಟ್ಟ ಮೇಲ್ವಿಚಾರಣೆಗಾಗಿ ನಿಯೋಜಿತವಾಗಿರುವ ಶಾಖಾಧಿಕಾರಿಯವರಾದ ಶ್ರೀ ಬಾಬುರಾವ್, ಕಿರಿಯ ಇಂಜಿನೀಯರ್, ಜಿಲ್ಲಾ ಪರಿಷತ್ ಉಪವಿಭಾಗ, ರಾಯಚೂರು- ಸದರಿ ಅಧಿಕಾರಿಯ ವೈಯಕ್ತಿಕಕ ವಿವರಗಳಾದ ಜನ್ಮ ದಿನಾಂಕ, ವಯೋನಿವೃತ್ತಿ ಇತ್ಯಾದಿ ವಿವರಗಳನ್ನು ಇದುವರೆವಿಗೂ ಸಲ್ಲಿಸಿರುವುದಿಲ್ಲ. ಆಪಾದಿತ ಕಾಮಗಾರಿಯ ಅನುಷ್ಠಾನದ ಸಮಯದಲ್ಲಿ ಹಾಗೂ ಪರಿಶೀಲನೆಯ ಸಮಯದಲ್ಲಿ ಶ್ರೀಮತಿ ಪುಷ್ಪಲತಾ, ಗಿಲ್ಲೆಸಗೂರು ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಾಗಲೀ ಅಥವಾ ಅಂದಿನ ರಾಯಚೂರು ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಯವರಾಗಲೀ ಆಪಾದಿತ ರಸ್ತೆ ಕಾಮಗಾರಿಯನ್ನು ನಿರ್ಮಾಣದ ಹಂತದಲ್ಲಿ ಕೆಲವೊಮ್ಮೆ ಪರಿವೀಕ್ಷಿಸಿದ್ದಲ್ಲಿ ಇದರ ವಾಸ್ತವಿಕ ಉದ್ದವನ್ನು ಸರಿಯಾಗಿ ಅಳೆದು ಪರೀಕ್ಷಿಸಿದ್ದರೆ, ಪ್ರಸ್ತುತ ನಡೆದಿರುವ ಲೋಪವನ್ನು ತಡೆಯಬಹುದಾದ ಸಾಧ್ಯತೆಯಿದ್ದು, ತನ್ಮೂಲಕ ಇಲಾಖೆಗೆ ಪ್ರಸ್ತುತ ಆಗಿರುವ ಆರ್ಥಿಕ ನಷ್ಟವನ್ನು ತಪ್ಪಿಸಬಹುದಾಗಿದ್ದು, ಈ ನಿಟ್ಟಿನಲ್ಲಿ ಅವರುಗಳು ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಸೂಕ್ತವಾಗಿ ನಿರ್ವಹನಿಸದೇ ಪಾವತಿಗೆ ಶಿಫಾರಸ್ಸು ಮಾಡಿ ಅನುಮೋದಿಸಿ, ಇದನ್ನು ಸರ್ಕಾರದ ಹಣಪಾವತಿಗೆ ಪರಿಗಣಿಸಿರುವ ಕಾರಣ, ಈ ನಿಟ್ಟಿನಲ್ಲಿ

ಸದರಿಯವರಿಬ್ಬರೂ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ಸೂಕ್ತವಾಗಿ ನಿರ್ವಹಿಸಿರುವುದಿಲ್ಲವೆಂದು ಅಭಿಪ್ರಾಯಿಸಲಾಗಿದೆ.

ಮೇಲೆ ವಿವರಿಸಿರುವಂತೆ, ತನಿಖಾಧಿಕಾರಿಯವರ ವರದಿ ಮತ್ತು ದಾಖಲೆಗಳಿಂದ ಎದುರುದಾರರು 1 ರಿಂದ 3 ರವರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ತಮಗೆ ವಹಿಸಿಕೊಡುವಂತೆ ಮಾನ್ಯ ಉಪಲೋಕಾಯುಕ್ತ-1 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅಂತೆಯೇ ಕ್ರಮವಹಿಸುವಂತೆ ನಿಬಂಧಕರು, ರವರು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಕಂಡು ಬರುತ್ತದೆ. ಆದುದರಿಂದ, ಮಾನ್ಯ ಉಪಲೋಕಾಯುಕ್ತರು, ತಮ್ಮ ವರದಿಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸಿನಂತೆ, ಎದುರುದಾರರಾದ ಶ್ರೀಮತಿ ಪುಷ್ಪಲತಾ ಜಿ. ಪಂಚಾಯತ ಅಭಿವೃದ್ಧಿ ಅಧಿಕಾರಿ, ಗಿಲ್ಲೇಸೂಗೂರು ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು, ಶ್ರೀ ಜಿ.ಎಂ.ಬಸಣ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ರಾಯಚೂರು, ಮತ್ತು ಶ್ರೀ ಬಾಬುರಾವ್, ಕಿರಿಯ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ಉಪವಿಭಾಗ ರಾಯಚೂರು, ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ, ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು-1, ಇವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 41 ವಿಸೇಬಿ 2017 ಬೆಂಗಳೂರು ದಿನಾಂಕ: 20-02-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಈ ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀಮತಿ ಪುಷ್ಪಲತಾ ಜಿ., ಪಂಚಾಯತ ಅಭಿವೃದ್ಧಿ ಅಧಿಕಾರಿ, ಗಿಲ್ಲೇಸೂಗೂರು ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ. | 1 |
| 2 | ಶ್ರೀ ಜಿ.ಎಂ.ಬಸಣ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ರಾಯಚೂರು | 2 |
| 3 | ಶ್ರೀ ಬಾಬುರಾವ್, ಕಿರಿಯ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ಉಪವಿಭಾಗ ರಾಯಚೂರು. | 3 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

20/02/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ರಾಯಚೂರು.
5) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.